# ಸಾಹಿತ್ಯ ಸೌರಭ



ನಪಿನ ಹೊತ್ತಿಗೆ

ಸಾಹಿತ್ಯ ಸಂಸ್ಕೃತಿ

ಫೆಬ್ರುವರಿ
೩ ಮತ್ತು ೪, ೨೦೦೯

## ಹಾವೇರಿ ಜಿಲ್ಲಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ

ಹಾವೇರಿ - ೫೮೧ ೧೧೦.

ಶುಭ ಹಾರ್ೈಕೆಗಳೊಂದಿಗೆ, ✆ : 32434 : 34534

## ದಿ. ಕಾರ್ಡಮಮ್ ಮರ್ಚಂಟ್ಸ್ ಕೋ-ಆಪರೇಟಿವ್ ಬ್ಯಾಂಕ ಲಿ., ಹಾವೇರಿ

ಭಾರತಿಯ ರಿಝರ್ವ ಬ್ಯಾಂಕಿನ ನಂ. UBD KA. 647-P. 13-11-1986

ಸ್ಥಾಪನೆ : 1966

ದಿನಾಂಕ 31-12-2000 ಕ್ಕೆ ಇದ್ದಂತೆ ಆರ್ಥಿಕ ಸ್ಥಿತಿಯ ಪಕ್ಷಿನೋಟ ರೂ. ಲಕ್ಷಗಳಲ್ಲಿ.

| | |
|---|---|
| ಶೇರುಭಂಡವಲು | : 26.63 |
| ರಿಝರ್ವ ಮತ್ತು ಇತರೆ ಫಂಡಗಳು | : 214.50 |
| ಠೇವುಗಳು | : 944.43 |
| ಸಾಲಗಳು | : 913.96 |
| ದುಡಿಯುವ ಭಂಡವಾಲು | : 1406.66 |
| ನಿವ್ವಳ ಲಾಭ | : 46.28 |
| ಡಿವ್ಹಿಡೆಂಡ | : 18 (ಶೇಕಡಾ) |
| ಆಡಿಟ್ ವರ್ಗ | : "ಎ" ಕ್ಲಾಸ್. |

## : ಆಡಳಿತ ಮಂಡಳಿ ಸದಸ್ಯರು :

| | |
|---|---|
| ಶ್ರೀ ಎಸ್. ಎಸ್. ಮುಚ್ಚಿ | : ಚೇರಮನ್ನರು |
| ಶ್ರೀಮತಿ ಕೆ. ಎಸ್. ಹೊರಡಿ | : ವ್ಹಾಯಿಸ ಚೇರಮನ್ನರು |
| ಶ್ರೀ ವ್ಹಿ. ಬಿ. ಕುರುಬಗೊಂಡ ಶೆಟ್ಟರ | : ಡಾಯರೆಕ್ಟರ |
| ಶ್ರೀ ಸಿ. ಎಲ್. ಬಾಲೇಹೊಸೂರ | : ,, |
| ಶ್ರೀ ಸಿ. ಎಂ. ಮಾರ್ತುರ | : ,, |
| ಶ್ರೀ ಎಸ್. ಆರ್. ನೆಲವಿಗಿ | : ,, |
| ಶ್ರೀ ಸಿ. ಎಸ್. ಅರಣಿ | : ,, |
| ಶ್ರೀ ಬಿ. ವ್ಹಿ. ಮಳಗಿ | : ,, |
| ಶ್ರೀ ಭೂರಮಲ್ ಪಿ. ಶಹಾ | : ,, |
| ಶ್ರೀ ಎಚ್. ಆರ್. ಬದಾಮಿ | : ,, |
| ಶ್ರೀ ಎಸ್. ಎಚ್. ಗುಂಜಾಳ | : ,, |
| ಶ್ರೀ ಎಸ್. ಆರ್. ಬನಪ್ಪನವರ ಬಿ. ಎಸ್. ಸಿ., ಜಿ. ಡಿ. ಸಿ. | : ಮ್ಯಾನೇಜರ |

1) ಬ್ಯಾಂಕಿನಲ್ಲಿ ಸೇಫ್ ಡಿಪಾಜಿಟ್ ಲಾಕರಗಳ ಸೌಲಭ್ಯ
2) ರೂಪಾಯಿ ಒಂದು ಲಕ್ಷದವರೆಗೆ ಠೇವುಗಳು ವಿಮೆರಕ್ಷಣೆಯಲ್ಲಿರುತ್ತವೆ.
3) ಜೀವನ ನಿಧಿ ಕ್ಯಾಶ್ ಸರ್ಟಿಫಿಕೇಟಗಳಲ್ಲಿ ಹಣ ತೊಡಗಿಸಿದಲ್ಲಿ 81 ತಿಂಗಳಲ್ಲಿ ದ್ವಿಗುಣಗೊಳ್ಳುವದು.
4) ಸಂಪೂರ್ಣ ಗಣಕೀಕೃತಗೊಂಡ ಬ್ಯಾಂಕ.

ವಂದನೆಗಳೊಂದಿಗೆ,



# ಹಾವೇರಿ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು.

✍ - ಶ್ರೀ ಎನ್.ಸಿ. ದೇಸಾಯಿ
(ಅಗಡಿ)

❋ ❋ ❋

ಕೆಲ ಘಟನೆಗಳು ನಡೆದಾಗ ಕೆಲವರಿಗೆ ಲಾಭ, ಸಂತೋಷವಾಗುತ್ತದೆ. ಅದೇ ಸಂದರ್ಭ ಇನ್ನೊಬ್ಬರ ಮನಸ್ಸನ್ನು ನೋಯಿಸಿರಲುಬಹುದು. ಧಾರವಾಡ ಜಿಲ್ಲೆ ಮೂರು ಭಾಗವಾಗಿ ಮಾರ್ಪಟ್ಟಾಗ ಅಂಥ ಒಂದು ಪ್ರಸಂಗ ನಡೆದಿದೆ. ಅದನ್ನು ಅದೆಷ್ಟು ಜನ ಗಮನಕ್ಕೆ ತಂದುಕೊಂಡಿದ್ದಾರೆಯೋ ತಿಳಿಯದು!.


ಧಾರವಾಡ ಜಿಲ್ಲೆ ಹಾವೇರಿ ಗದಗುಗಳನ್ನು ಕೂಡಿಕೊಂಡಿದ್ದಾಗಿನ ಸೊಬಗು ಈಗ ಅದಕ್ಕಿಲ್ಲ. ಧಾರವಾಡ ಜಿಲ್ಲೆಗೆ ಪ್ರೇಕ್ಷಣೀಯ ಸ್ಥಳಗಳಾಗಲೀ, ಪ್ರವಾಸೀ ಮಹತ್ವದ ಸ್ಥಳಗಳಾಗಲೀ ಉಳಿಯಲಿಲ್ಲವಲ್ಲವೆಂಬ ಕಳವಳ! ಅಂಥ ಮಹತ್ವದ ಸ್ಥಳಗಳನ್ನು ಗದಗು ಮತ್ತು ಹಾವೇರಿ ಜಿಲ್ಲೆಗಳು ಕಿತ್ತುಕೊಂಡುಬಿಟ್ಟವು. ಅದೊಂದು ಅಕಸ್ಮಾತ್ತಾಗಿ ಹಾವೇರಿಗೆ ಬಂದ ಭಾಗ್ಯ. ಆದರೆ ಜಿಲ್ಲೆಯ ಹಿರಿಯರು ಪಂಚಾಯತ ಅಧ್ಯಕ್ಷರು ಹಾಗೂ ಸರಕಾರ ತಕ್ಕ ಪ್ರಚಾರ ಆಕರ್ಷಣೀಯ ಕರಪತ್ರ ಮುಂತಾದ ಮಾಧ್ಯಮಗಳಿಂದ ಪ್ರವಾಸಿಗರನ್ನು ಆಕರ್ಷಿಸಬೇಕು. ಅದರಿಂದ ಮಧ್ಯಮ ವರ್ಗದ ಜನಕ್ಕೊಂದಿಷ್ಟು ಆರ್ಥಿಕ ಬೆಂಬಲವೂ ದೊರಕೀತು. ಆ ನಿಟ್ಟಿನಲ್ಲಿ ಶಿಸ್ತಿನ ಕಾರ್ಯ ನಡೆಯಬೇಕು.

### ಹಾವೇರಿ

ಹಾವೇರಿ ನಗರದಲ್ಲಿಯೇ ಅತ್ಯಂತ ಆಕರ್ಷಣೀಯ ಕಲಾಪೂರ್ಣವಾದ ಒಂದು ವಾಸ್ತುಶಿಲ್ಪ ನಿಂತಿದೆ ಎಂದು ಊರಿನ ಜನಕ್ಕೆ, ತಾಲೂಕಿನವರಿಗೆ ತಿಳಿಯದೇ ಇರುವ ಸಂಭವವಿರಬಹುದು, ಎಂದು ಬಹು ಅಳುಕಿನಿಂದ ಹೇಳಬೇಕಾಗುತ್ತದೆ.

ಈ ಕಲೆಯ ಬೀಡನ್ನು ನನ್ನ ಗಮನಕ್ಕೆ ತಂದವರು, ನಾನು ಚಿಕ್ಕವನಿರುವಾಗ ಹಾವೇರಿ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದ. ದಿ ॥ ಶ್ರೀ ಕಾಳಪ್ಪ ಗುಡಿಸಾಗರ ಮಾಸ್ತರರು. ನಿಜ ನಾನೇನು ಹಾವೇರಿ ಹೈಸ್ಕೂಲಿನ ವಿದ್ಯಾರ್ಥಿಯಾಗಿರಲಿಲ್ಲ. ಶಾಲೆ ಮೂಲೆ ಇಲ್ಲದೆ ಹಳ್ಳಿಯಲ್ಲಿ ಕೊಳೆಯುತ್ತಿದ್ದ ಬೇಸಾಯದಲ್ಲಿ ತೊಡಗಿದ ಹುಡುಗನಾಗಿದ್ದೆ. ಆದರೆ ನಾನು ಆಗೀಗ ಗೀಚುತ್ತಿದ್ದ ಚಿತ್ರಗಳನ್ನು ನನ್ನ ಊರಿನವರಾದ ಕೆಲ ವಿದ್ಯಾರ್ಥಿಗಳ ಮೂಲಕ ನೋಡಿಯೇ ಗುಡಿಸಾಗರರು ನನ್ನನ್ನು ಕಾಣಲು ಬಯಸಿದರು. ನೋಡಿ ನನಗೆ ಆ ಸಮಯದಲ್ಲಿ ಚಿತ್ರಕಲೆಯಲ್ಲಿ ಅದೆಂತಹ ಪ್ರೋತ್ಸಾಹನ ಉತ್ಸಾಹ ಹುರುಪು ನೀಡಿದರು ಎಂಬುದನ್ನು ಯಾವ ಶಬ್ದದಲ್ಲಿ ಹೇಳಲು ಸಾಧ್ಯ? ಇಷ್ಟೇ ಅಂದು ಆ ಮಾತುಗಳನ್ನು ಅವರು ಹೇಳಿರದಿದ್ದರೆ ಇಂದು ನಾನು ಚಿತ್ರಕಲೆಯಲ್ಲಿ ಇಷ್ಟು ಸಾಧನೆಯನ್ನು ಮಾಡಲು ಸಾಧ್ಯವೇ ಇರಲಿಲ್ಲ. ನಿಜವಾಗಿಯೂ ಇರಲಿಲ್ಲ!!

ಹಾವೇರಿ ರೈಲು ನಿಲ್ದಾಣದಿಂದ ಊರೊಳಗೆ ಹೋಗಬೇಕಾದ ಮಾರ್ಗದಲ್ಲಿ ಎಡಬದಿಗೆ ಸುಂದರವಾದ ಪ್ರಾಚೀನ ಮಂದಿರವೊಂದು ನಿಂತಿದೆ. ಕಲಾಸಕ್ತನಾದವನಿಗೆ ಮಂದಿರ ಕೈಮಾಡಿ ಕರೆಯುತ್ತದೆ! ಅದೇ ಮಾಸ್ತರರು ನನಗೆ ತೋರಿಸಿದ ಪುರಸಿದ್ಧಪ್ಪನ ಗುಡಿ. ೫೫-೬೦ ವರ್ಷಗಳ ಹಿಂದಿನ ಮಾತಾಗಿರಬೇಕು, ನಾವಲ್ಲಿ ಹೋದಾಗ ಊರಿನ ಕೆಲ ನಿರುದ್ಯೋಗಿ ಜನ ಅಂತಿಂಥ ಆಟವಾಡುತ್ತ ಕುಳಿತಿದ್ದರು. ಸುತ್ತಲೆಲ್ಲ ಕಲ್ಲು ಕಂಟಿಗಳು ಗೋಚರಿಸಿದ ನೆನಪು. ಈಗ ಆ ಚಿತ್ರ ಬದಲಾಗಿದೆ. ಪ್ರಾಚ್ಯವಸ್ತು ಇಲಾಖೆಯವರ ಕೈಯಲ್ಲಿ ಅದು ಹೋಗಿದೆ, ಎಂದು ಕಾಣುತ್ತದೆ. ತಕ್ಕಮಟ್ಟಿಗಿನ ವ್ಯವಸ್ಥೆ ಕಾಣುತ್ತದೆ. ಒಂದೆರಡು ವರುಷಗಳ ಹಿಂದೆ ದುರಸ್ತಿ ಕೂಡ ಆಗಿರಬೇಕು.



ಪುರಸಿದ್ದೇಶ್ವರ ದೇವಸ್ಥಾನ ಹಾವೇರಿ.

ಕ್ರಿ.ಶ. ೧೧೮೯ ರ ಒಂದು ಶಿಲಾಶಾಸನದ ಪ್ರಕಾರ ಚಾಲುಕ್ಯ ಅರ್ಮಡಿ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದ 'ನಿಂಬ'ನೆಂಬ ಅಧಿಕಾರಿಯು ಈ ದೇವಸ್ಥಾನಕ್ಕಾಗಿ ಕೆಲ ದಾನಗಳನ್ನು ಮಾಡಿದ ಉಲ್ಲೇಖವಿದೆ. ಕೆಲ ಶಾಸನಗಳ ಕಾಳಾಮುಖ ಪಂಥಕ್ಕೆ ಸೇರಿದ 'ಜ್ಞಾನರಾಶಿ ಎಂಬ ಹೆಸರಿನ ಉಲ್ಲೇಖವು ಇದ್ದ ಬಗ್ಗೆ ಹೇಳಿದ್ದುಂಟು (?) ಹೀಗೆ ಇನ್ನು ಕೆಲ ಉಲ್ಲೇಖಗಳು ಕಂಡು ಬರುತ್ತವೆ. ೧೨-೧೩ ನೇಯ ಶತಮಾನದಲ್ಲಿ ಕಾಳಮುಖರ ಪ್ರಾಭಲ್ಯ ಈ ನಾಡಿನಲ್ಲಿ ಹೆಚ್ಚು ಕಂಡುಬರುತ್ತದೆ.!

ಶಾಸನ ಇತಿಹಾಸದ ಕತೆ ಒಂದಾದರೆ ದಂತಕತೆ ಬೇರೆಯೇ ಹೇಳುತ್ತದೆ.

ಗರ್ಭ ಮಂದಿರದಲ್ಲಿ ಒಂದು ಭಾವಿ ಇದೆಯೆಂದು ಹೇಳುತ್ತಾರೆ. ಸಿದ್ಧಪ್ಪನೆಂಬವನು ನಿತ್ಯ ಆ ಭಾವಿಯ ದಂಡೆಯ ಮೇಲೆ ಕುಳಿತು ಶಿವಪೂಜೆ ಮಾಡುತ್ತಿದ್ದನು. ಪೂಜೆಯಾಗದೆ ಆಹಾರ ಮುಟ್ಟುತ್ತಿರಲಿಲ್ಲ. ಅದೊಂದು ದಿನ ಪೂಜೆಗೆ ಕುಳಿತಾಗ ಕೈಯಲ್ಲಿಯ ಲಿಂಗವು ಜಾರಿ ಬಾವಿಯಲ್ಲಿ ಬಿದ್ದುಬಿಟ್ಟಿತು! ಅದು ಸಿಗದೆ ಪೂಜೆ ಇಲ್ಲ. ಪೂಜೆಯಿಲ್ಲದೇ ಆಹಾರವಿಲ್ಲ. ಅವನ ಈ ಮೌನ, ತಪಸ್ಸಿನ ತಾಣವಾಯಿತು. ಅದೇ ಐಕ್ಯಕ್ಕೂ ಕಾರಣವಾಯಿತು.

ಮಂದಿರದಲ್ಲೊಂದು ಜಟಾಧಾರಿಮೂರ್ತಿಯಿದೆ. ಕಾಳಮುಖ ಪಂಥಕ್ಕೆ ಸೇರಿದ ಯತಿಯ ಮೂರ್ತಿ ಎಂದು ಭಾವಿಸಿದರೆ ಅದು ಸಿದ್ದಪ್ಪನದೆಂದು ಊಹಿಸುವುದು ಉಂಟು. ಈ ಮಂದಿರವಿರುವ ಪ್ರದೇಶಕ್ಕೆ 'ಪುರ' ಎಂದು ಈಗಲೂ ಕರೆಯುವುದುಂಟು. ಅದಕ್ಕೆ ಸಿದ್ಧನ ಹೆಸರು ಜೋಡಣೆಯಾಗಿ ''ಪುರಸಿದ್ಧಪ್ಪನ ಗುಡಿ'' ಎಂದು ಕರೆಯುತ್ತಾರೆಂಬುದು ಕೆಲ ಇತಿಹಾಸ ತಜ್ಞರ ಹೇಳಿಕೆ!

ಕತೆ ಇತಿಹಾಸ ಏನೇ ಇರಲಿ ಅಲ್ಲಿಯ ಕೆತ್ತನೆಯನ್ನು ನೋಡಿದರೆ ''ಕಲ್ಲರಳಿ ಕುಸುಮವಾಗಿದೆ ಇಲ್ಲಿ--'' ಎಂಬ ಮಾತು ಜ್ಞಾಪಕಕ್ಕೆ ಬರುತ್ತದೆ. ಮೂರ್ತಿಗಳು ಚಿಕ್ಕದಾಗಿದ್ದರೂ ಅದೆಂಥ ಸುಂದರಭಂಗಿ ಅದೇನು ಮೈಮಾಟ, ಎಂತಹ ಹಾವಭಾವ! ಇವನ್ನೆಲ್ಲ ಶಬ್ದಗಳಲ್ಲಿ ಹೇಳಲೇ ಸಾಧ್ಯವಿಲ್ಲ. ಗುಡಿಸಾಗರ ಮಾಸ್ತರರು ಈ ಮಂದಿರವನ್ನು ನನ್ನ ಕಣ್ಣಿಗೆ ಹಾಕಿದ ಮೇಲೆ ನನ್ನಲ್ಲಿಯ ಕಲಾಪ್ರಜ್ಞೆಗೆ ಬೇರೊಂದು ತಿರುವು ಸಿಕ್ಕಿತು ಎಂದು ನಿಶ್ಚಿತ ಹೇಳಬೇಕು. ಜೀವನದಲ್ಲಿ ಒಮ್ಮೆಯಾದರೂ ಅದನ್ನು ನೋಡಬೇಕು! ಸಮಾಧಾನ ಪಡೆಯಬೇಕು.


ಇದು ಹಾವೇರಿಯ ವಾಸ್ತುಶಿಲ್ಪದ ವಿಷಯವಾದರೆ ಈ ಊರು ಒಂದು ಕಾಲಕ್ಕೆ ದೇಶದ ಯಾಲಕ್ಕಿ ವ್ಯಾಪಾರಕೇಂದ್ರವಾಗಿತ್ತು. ಯಾಲಕ್ಕಿಯಿಂದ ಮಾಲೆ ಗುಚ್ಛ ಮಾಡುವ ಕಾಯಕ ಆಗಿನ ಕಾಲಕ್ಕೆ ಪ್ರಾರಂಭವಾದುದು ಇನ್ನೂ ತಕ್ಕ ಮಟ್ಟಿಗೆ ನಡೆಯುತ್ತಲಿದೆ. ನಾಡಿನ ದೇಶದ ಹಿರಿಯರು ಬಂದರೆ ಯಾಲಕ್ಕಿ ಮಾಲೆಯದೇ ಮರ್ಯಾದೆ!

ಹಾವೇರಿಯ ಪುರಸಿದ್ಧಪ್ಪನ ಗುಡಿಯ ವಿಷಯ, ಅದರ ಕಲೆಯ ಸೊಬಗನ್ನು ಸಂಕ್ಷಿಪ್ತವಾಗಿ ನೋಡಿದ್ದಾಯಿತು. ಜಿಲ್ಲೆಯ ಇನ್ನಿತರ ಸ್ಥಳಗಳನ್ನು ನೋಡೋಣ. ಇಲ್ಲಿಂದ ಪೂರ್ವಕ್ಕೆ ಮೊದಲು ಹೋಗುವುದೇ ಚನ್ನ ಎಂದು ಕಾಣುತ್ತದೆ. ಸರಿ, ಗಳಗನಾಥವನ್ನೇ ನಮ್ಮ ಮೊದಲ ತಾಣವಾಗಿ ಮಾಡಿಕೊಳ್ಳೋಣ. ಶಿರಸಿ ಮೊಳಕಾಲ್ಮೂರು ಮಾರ್ಗವಾಗಿ ಹೊರಟರೆ ಗುತ್ತಲ ಸಿಕ್ಕುತ್ತದೆ. ಅಲ್ಲಿಂದ ಬೆಳವಿಗಿ ಹೋದರೆ ಕೆಲವೇ ಕಿಲೋಮೀಟರುಗಳಲ್ಲಿ 'ಗಳಗನಾಥ' ಊರು ಸಿಕ್ಕುವುದು. ಊರುದಾಟಿ ಹೋದರೆ ತುಂಗಭದ್ರೆಗೆ ವರದಾನದಿ ಬಂದು ಸೇರಿದ ಸಂಗಮದ ಸ್ಥಳ ಕಾಣುತ್ತದೆ. ಅದೇ ತೀರದ ಮೇಲೆಯೇ ಎತ್ತರದ ಶಿಲಾ ವಿನ್ಯಾಸದ ಮೇಲೆ ಗಳಗೇಶ್ವರನ ಭವ್ಯ ಮಂದಿರ! ಎತ್ತರದ ಅಧಿಷ್ಠಾನ ನಕ್ಷತ್ರದ ನಕ್ಷೆಯನ್ನು ಹೊಂದಿದೆ. ಅಲ್ಲದೆ ಅಧಿಷ್ಠಾನ ಎತ್ತರವಾಗಿರುವುದಕ್ಕೆ ಕಾರಣ ಮಹಾಪೂರದಿಂದ ಮಂದಿರಕ್ಕೆ ಧಕ್ಕೆಯಾಗಬಾರದೆಂಬುದೇ ಉದ್ದೇಶವಾಗಿರಬೇಕು. ಚೌಕಾಕೃತಿಯ ಮಂದಿರದ ಗೋಪುರ ಮೇಲಕ್ಕೇರಿದಂತೆ ಚಿಕ್ಕದಾಗಿದೆ. ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದೆ. ಬಾಗಿಲವಾಡ ೧೨ ಅಡಿ ಎತ್ತರವಾಗಿದ್ದು ಒಳಗಿದ್ದ ಲಿಂಗವು ಆಳೆತ್ತರವಾದ ಭವ್ಯ ಲಿಂಗ, ಈ ಗರ್ಭದಲ್ಲಿಯೆ ಸಪ್ತ ಮಾತೃಕೆಯ ಮೂರ್ತಿಗಳಿವೆ. ಅಂತರಾಳದಲ್ಲಿ ಜನಾರ್ದನ, ಸರಸ್ವತಿ ಮೂರ್ತಿಗಳಿದ್ದು ನವರಂಗದಲ್ಲಿ ಆಳೆತ್ತರದ ವಿಷ್ಣು, ಮಹಿಷಾಮರ್ಧಿನಿ,ಗಣಪತಿ, ಹಾಗೂ ಸೂರ್ಯ ಮುಂತಾದ ಚಾಲುಕ್ಯ ಶೈಲಿಯ ಮೂರ್ತಿಗಳಿವೆ!

ದೇವಾಲಯ ಕ್ರಿ.ಶ. ೧೧ನೇ ಶತಮಾನದ ಕಾಲದಲ್ಲಿ ನಿರ್ಮಾಣವಾಗಿರಬೇಕೆಂದು ಊಹಿಸಲಾಗಿದೆ. ಈ ಗಳಗೇಶ್ವರ ದೇವಾಲಯದಲ್ಲಿನ ಮೊದಲನೇಯ ಶಾಸನವು ಚಾಳುಕ್ಯ ಸೋಮೇಶ್ವರ (ಕ್ರಿ.ಶ.೧೦೫೬) ನ ಕಾಲಕ್ಕೆ ಸೇರಿದ್ದರ ಉಲ್ಲೇಖ ಸ್ಪಷ್ಟವಾಗಿಲ್ಲ. ಅಲ್ಲದೇ ''ಬನವಾಸಿ ಪುರಾಧೀಶ್ವರ ಎಂಬ ಬಿರುದಿನ ಮಾಂಡಲೀಕನೊಬ್ಬನ ಹೆಸರನ್ನೂ ಸೂಚಿಸುತ್ತದೆ. ಎರಡನೇ ಶಾಸನವು ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು ಕ್ರಿ.ಶ.೧೦೭೯ ರಲ್ಲಿ ಮೊಕರಿ ಬೊಮ್ಮಯ್ಯನಿಂದ ದೇವಾಲಯದ ಮಂಟಪ ನಿರ್ಮಾಣಕ್ಕಾಗಿ ನೀಡಿದ ಸುವರ್ಣದಾನದ ವಿಷಯವನ್ನು ಅರಹುತ್ತದೆ. ೩ನೇ ಶಾಸನವು



''ಜನಕಂಜಿ ನಡೆದರೇನುಂಟು, ಮನಕಂಜಿ ನಡೆಯಬೇಕು''



ಗಳಗೇಶ್ವರ ದೇವಸ್ಥಾನ, ಗಳಗನಾಥ.

ಕೂಡ ವಿಕ್ರಮಾದಿತ್ಯನ ಕಾಲಕ್ಕೇ ಸೇರಿದ್ದು (ಕ್ರಿ.ಶ.೧೦೮೦) ದೇವಸ್ಥಾನಕ್ಕೆ ಪುಲ್ಲಣ ಗ್ರಾಮದ ಪುನರ್ವಸತಿಯನ್ನು ಮಹಾಮಂಡಳೇಶ್ವರ ಚನ್ನರಸನು ನೀಡಿದ ವಿಷಯ ತಿಳಿಸುತ್ತದೆ.

ವಿನ್ಯಾಸ ನಕ್ಷೆಯಲ್ಲವೂ ಆಕರ್ಷಣೀಯವಾಗಿವೆ. ಕೂಲಂಕುಷವಾಗಿ ನೋಡಬೇಕೆಂದರೆ ಕೊನೆ ಪಕ್ಷ ಅರ್ಧ ದಿನವಾದರೂ ಬೇಕು! ಈ ಊರು ಕನ್ನಡ ಕಾದಂಬರೀ ಸಾಮ್ರಾಟ 'ಗಳಗನಾಥ'ರ ಹುಟ್ಟೂರು. ಅವರೇ ವೆಂಕಟೇಶ ತಿರಕೋ ಕುಲಕರ್ಣಿ.

## ಹಾವನೂರು

ಇಲ್ಲಿಂದ ನಾವು ಹಾವನೂರಿಗೆ ಬಂದರೆ ಅಲ್ಲಿ ವೀರಹನುಮಂತಗೌಡನ ಕೋಟೆಯ ಅವಶೇಷಗಳನ್ನು ನೋಡಬಹುದು. ಹಾಗೂ ಜಾಗೃತಿ ದೇವಿ ದ್ಯಾಮವ್ವನ (ಮುಸುಕಿನ) ದರ್ಶನ ಪಡೆಯಬಹುದು. ಇಲ್ಲಿಂದ ಗುತ್ತಲ ಕಡೆಗೆ ಹೊರಟರೆ೧ ಕಿ.ಮೀ. ಅಂತರದಲ್ಲಿ ಎಡಬದಿಗೆ ಕೆಲ ಮಂದಿರಗಳ ಸಮೂಹ ಕಣ್ಣಿಗೆ ಬೀಳುತ್ತದೆ. ಅದೇ 'ಚಿಕ್ಕಮೈಲಾರ' ಮಣ್ಣಿಮೈಲಾರಕ್ಕೆ ನೀನು ದರ್ಶನಕ್ಕೆ ಬರಬೇಡ! ನಾನು ನೀನಿದ್ದಲ್ಲಿಗೇ ಬರುತ್ತೇನೆಂದು ಹಾವನೂರು ಗೌಡನಿಗೆ ಮೈಲಾರನು ಹೇಳಿದ ಪ್ರತೀಕ ಈ ಚಿಕ್ಕ ಮೈಲಾರ ನಿರ್ಮಾಣಕ್ಕೆ ಕಾರಣ. ಹಾವನೂರು ಕೋಟೆಯಿಂದ ಈ ಮಂದಿರಕ್ಕೆ ಸೋಪಾನ ಮಾರ್ಗವಿದೆ (ನೆಲಮಾರ್ಗ). ಈ ರೀತಿಯಿಂದ ಹಾವನೂರು ಒಂದು ಐತಿಹಾಸಿಕ ಸ್ಥಳ. ಬಹದ್ದೂರ ಹನುಮಂತ ಗೌಡನನ್ನು ಟಿಪ್ಪು ಸುಲ್ತಾನನು ಸೋಲಿಸಿ ಶ್ರೀರಂಗಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಗಲ್ಲಿಗೇರಿಸಿದ ನಂತರ ಹಾವನೂರು ಸಂಸ್ಥಾನ ಕೊನೆಯಾಯಿತು. ಆ ನಂತರ ಅವನ ವಂಶಜರಿಗೆ ಪೇಶ್ವೆಯವರು ಅಗಡಿ ಗ್ರಾಮವನ್ನು




ಹಾವನೂರ ಕೋಟೆಯಲ್ಲಿನ ಬಾವಿ.

ತಾತ್ಪೂರ್ತಿಕ ಜೀವನೋಪಾಯಕ್ಕೆಂದು ಇನಾಮು ಹಾಕಿ ಕೊಟ್ಟರು. ಅವರೇ ಈಗಿರುವ ಅಗಡಿಯ ಬಹದ್ದೂರ ದೇಸಾಯರು.

**ಹರಳಹಳ್ಳಿ**

ಹಾವನೂರಿಂದ ನದಿ ದಂಡೆಗುಂಟ ಸ್ವಲ್ಪದೂರ ದಕ್ಷಿಣಕ್ಕೆ ಹೋದರೆ ಹರಳಹಳ್ಳಿ ಸಿಕ್ಕುತ್ತದೆ. ಇಂಥ ಒಂದು ಕೊಂಪೆಯಲ್ಲಿ ಹೊಯ್ಸಳ ಶೈಲಿಯ ಒಂದು ಸುಂದರ ಮಂದಿರವಿದೆ ಎಂಬುದು ವಾಸ್ತುವಿಷಯದ ಬಗ್ಗೆ, ಇತಿಹಾಸದ ಬಗ್ಗೆ ಆಸ್ಥೆಯಿದ್ದವರನ್ನು ಬಿಟ್ಟರೆ ಸಾಮಾನ್ಯ ಜನರ ಕಣ್ಣಿಗೆ ಬೀಳುತ್ತಿಲ್ಲವೆಂಬುದು ದುಃಖದ ಸಂಗತಿ.



ತ್ರಿಕುಟಾಚಲವಿರುವ ಈಶ್ವರ ಮಂದಿರವದು. ಇಲ್ಲಿ ಮೂರು ಅಂತರಾಳಗಳುಳ್ಳಮೂರುಗರ್ಭಗ್ರಹಗಳಿದ್ದು ಮಧ್ಯೆ ನವರಂಗ ಮಾತ್ರ ಒಂದೇ ಇದೆ! ಮೂರು ಗರ್ಭಗೃಹಗಳಲ್ಲೂ ಪ್ರತ್ಯೇಕ ಶಿವಲಿಂಗಗಳಿವೆ. ಅಂತರಾಳಗಳ ಬಾಗಿಲುವಾಡಗಳ ಇಕ್ಕೆಲದಲ್ಲೂ ಜಾಲಂದ್ರಗಳಿವೆ. ನವರಂಗದ ಮಧ್ಯದಲ್ಲಿ ಬಸವನ ಏಕಶಿಲಾಕೃತಿಯಿದೆ. ಮುಖ್ಯ ಗುಡಿಯ ಮೇಲೆ ಶಿಖರವಿದ್ದು ಮುಂಭಾಗದ ಶುಕನಾಸಿಯಲ್ಲಿ ಇರಬೇಕಾಗಿದ್ದ ಹೋಯಸಳ ಲಾಂಛನವನ್ನು ಮಂದಿರದ ಒಳಗೆ ಇರಿಸಲಾಗಿದೆ. ಉಳಿದೆರಡು ಮಂದಿರಗಳ ಮೇಲಿನ ಶಿಖರಗಳು ಕದಂಬನಾಗರ ಶೈಲಿಯನ್ನು ಹೋಲುತ್ತವೆ. ಕ್ರಿ.ಶ.೧೧೮೧ ರಲ್ಲಿ ಕಲ್ಯಾಣ ಶಕ್ತಿ ಮುನಿಯ ವಿನಂತಿಯ ಮೇರೆಗೆ ಜೋಯಿಸದೇವರಸನು ತುಂಗಭದ್ರಾತೀರದಲ್ಲಿ ವಿಕ್ರಮಾ ಪುರವನ್ನು ನಿರ್ಮಿಸಿ ವಿಕ್ರಮೇಶ್ವರ ಮತ್ತು ಗುತ್ತೇಶ್ವರ ದೇವಾಲಯಗಳಿಗೆ ಬಿಟ್ಟದಾನವನ್ನು ಹೇಳುವ ಶಾಸನ ಕನ್ನಡ ಸಂಶೋಧನಾ ಕೇಂದ್ರದಲ್ಲಿದೆ. ಐತಿಹಾಸಿಕ ವಿವರ ಇನ್ನಷ್ಟು ಇವೆ.... ಈ ಸುಂದರ ದೇವಸ್ಥಾನಗಳನ್ನು ನೋಡುವುದನ್ನು ತಪ್ಪಿಸಿಕೊಳ್ಳಬಾರದು. ಪ್ರಾಚ್ಯವಸ್ತು ಅಲಕ್ಷತೆಯಿಂದಾಗಿ ಮನೆಗಳು ಮಂದಿರಗಳ ತೀರ

ಹತ್ತಿರಹತ್ತಿರಕ್ಕೆ ನುಗ್ಗಿ ಅವುಗಳ ಅಂದವನ್ನು ಕೆಡಿಸುತ್ತಿವೆಯಲ್ಲ ಎಂಬುದೊಂದು ಮನಕ್ಕೆ ಬೇಜಾರು ಮಾಡುವ ವಿಷಯ!

### *ಚೌಡದಯ್ಯನಪುರ*

ಮುಂದೆ ಗುತ್ತಲ-ರಾಣಿಬೆನ್ನೂರು ಮಾರ್ಗಕ್ಕೆ ಬಂದು ಸ್ವಲ್ಪದೂರದ ನಂತರ ಎಡಕ್ಕೆ ಹೊರಳಿದರೆ ಚೌಡದಾನಪುರ ಸಿಕ್ಕುವದು. ಅದು ಕೂಡ ತುಂಗಭದ್ರೆಯ ದಡದಲ್ಲಿರುವ ಊರೇ.

ಇಲ್ಲಿರುವ ಮುಕ್ತೇಶ್ವರ ದೇವಾಲಯ ಒಂದು ಅಂದವಾದ ಶಿಲ್ಪ. ಚಾಲುಕ್ಯರ ಕಲೆಯ ಅಭಿರುಚಿಯನ್ನು ಬೀರುವ ಕಲ್ಪ. ಪೂರ್ವಾಭಿಮುಖವಾಗಿರುವ ಈ ಮಂದಿರವನ್ನು ಜಟಾಚೋಳ ವಂಶಜ ಗುತ್ತರಸರ ಮಾಂಡಳೀಕನಾಗಿದ್ದ ಮಲ್ಲುಗಿ ಕ್ರಿ.ಶ. ೧೧೧೫-೧೧೨೦ ರಲ್ಲಿ ಕಟ್ಟಿಸಿದನೆಂದು ಊಹಿಸಲಾಗಿದೆ. ಹಿಂದೆ ಕಾಳಮುಖ ಸಂಪ್ರದಾಯದ ಗುತ್ತರಸರ ಗುರುವಾಗಿದ್ದ 'ಶಿವದೇವ'ನೆಂಬವನು ಈ ದೇವಾಲಯದ ಜೀರ್ಣೋದ್ಧಾರ ಮಾಡಿದ ದಾಖಲೆಗಳಿವೆ. ಗರ್ಭಗೃಹ, ಅಂತರಾಳ, ನವರಂಗ ಜೋಡು ಮುಖ ಮಂಟಪಗಳನ್ನು ಹೊಂದಿದೆ. ಇರುವ ಗರ್ಭಗೃಹದ ತಳ ಬಹುಕೋನಾಕೃತಿಯದು ಇದ್ದು ವೃತ್ತಾಕಾರದ ಪಾಣಿಪೀಠದ ಮೇಲೆ ಲಿಂಗವಿದೆ!

ಇಲ್ಲಿಯ ವೈಶಿಷ್ಟ್ಯವೆಂದರೆ ನವರಂಗಕ್ಕೆ ಜೋಡುದ್ವಾರಗಳಿದ್ದು ಪೂರ್ವದ ಬಾಗಿಲು ಹೆಚ್ಚು ಅಲಂಕೃತವಾಗಿದೆ. ಅಲ್ಲಿ ಎರಡು ದೇವಕೋಷ್ಟಕಗಳಿದ್ದು ಒಂದರಲ್ಲಿ ಮಹಿಷಾಮರ್ದಿನಿ ಇನ್ನೊಂದರಲ್ಲಿ ಗಣಪತಿಯ ವಿಗ್ರಹಗಳಿವೆ.

ಈ ರೀತಿಯಾಗಿ ಶಿಲ್ಪಕ್ಕೆ ಆಕರ್ಷಣೀಯ ಸ್ಥಳವಾಗಿ ಅಂಬಿಗರ ಚೌಡಯ್ಯನ ಸ್ಥಾನವೂ ಇದುವೆ. ಸಂಕ್ರಮಣದ ಸಮಯದ ಜಾತ್ರೆಗೆ ಅಂಬಿಗರು ಬಹುಭಕ್ತಿಯಿಂದ ಇಲ್ಲಿಗೆ ಬರುತ್ತಾರೆ. ವಿಶಾಲ ಪಾತ್ರದ ದಂಡೆಯ ಮೇಲಿರುವ ಮುಕ್ತೇಶ್ವರ ದೇವಸ್ಥಾನ ನಿಸರ್ಗದ ರಮ್ಯತೆಯನ್ನು ಹೆಚ್ಚಿಸುತ್ತದೆ. ನಾನು ಚಿಕ್ಕವನಿದ್ದಾಗ ನನ್ನ ತಂದೆ ಇಲ್ಲಿಗೆ ಆಗಾಗ ವಿಹಾರಕ್ಕೆ ಬರುತ್ತಿದ್ದುದು ನನ್ನ ನೆನಪಿನ ಪಟಲದ ಮೇಲಿಂದ ಮಾಸಿಲ್ಲ! ಈ ಸ್ಥಳವನ್ನು ಆಕರ್ಷಣೀಯ ವಿಹಾರ ಸ್ಥಾನವನ್ನಾಗಿ ಮಾರ್ಪಡಿಸಲು ಎಲ್ಲ ಅನುಕೂಲತೆಗಳೂ ಇವೆ!


### *ದೇವರಗುಡ್ಡ*

ಇಲ್ಲಿಂದ ಗುತ್ತಲ-ರಾಣೇಬೆನ್ನೂರು ಮಾರ್ಗಕ್ಕೆ ಬಂದು ದಕ್ಷಿಣಾಭಿಮುಖವಾಗಿ ಹೊರಟರೆ ೨೦ ಕಿ.ಮೀ. ಅಂತರದ ಮೇಲೆ ಒಂದು ಗುಡ್ಡ. ಆ ಗುಡ್ಡದ ಮೇಲೊಂದು ಊರು, ಶಿಖರಗಳು, ದೇವಸ್ಥಾನಗಳು ಗೋಚರವಾಗುತ್ತವೆ. ಅದೇ ''ದೇವರಗುಡ್ಡ'' ಎಂದು ಪ್ರಸಿದ್ಧವಾದ ಏಳುಕೋಟಿ ಮೈಲಾರನ ಸ್ಥಾನ. ಅದು ಶಿಲ್ಪ ಸೌಂದರ್ಯ ಮುಂತಾದ ಆಕರ್ಷಣೀಯ ಸ್ಥಳವೇನೂ ಅಲ್ಲ, ಆದರೆ ಅದೊಂದು ಪುಣ್ಯಕ್ಷೇತ್ರ. ಶಿವನು ಮಾರ್ತಂಡ ಭೈರವನ ಅವತಾರ ತಳೆದು ಮಣಿ-ಮಲ್ಲರೆಂಬ ರಾಕ್ಷಸ ಸಹೋದರರನ್ನು ಸಂಹರಿಸಿದ ರುದ್ರಜಾಗೆ ಈ ಪುಣ್ಯ ಸ್ಥಳವಾಗಿ ಮಾರ್ಪಟ್ಟ ತಾಣ!

ಈ ಪವಿತ್ರ ಸ್ಥಾನ ಬೆಳಕಿಗೆ ಬಂದುದೇ ಒಂದು ವಿಚಿತ್ರ ಕತೆಯಾಗಿದೆ.



''ಚಿಂತೆಯೇ ಮುಪ್ಪು, ಉತ್ಸಾಹವೇ ಯೌವನ''



ದೇವರಗುಡ್ಡದ ದೇವಸ್ಥಾನಗಳು.

ಹಾವನೂರು ಸಂಸ್ಥಾನವಾಗಿದ್ದ ಕಾಲ, ರಾಜರ ದನಗಳು ಕೊಟ್ಟಿಗೆ ಪುಡುಪನಹಳ್ಳಿಯಲ್ಲಿ ದನ ಮೇಯಲು ಸುತ್ತಲು ಹೋಗುತ್ತಿದ್ದವು. ಆ ಜಂಗುಳಿಯಲ್ಲಿ ''ಕಲ್ಯಾಣಿ'' ಎಂಬುದೊಂದು ಗೋವು ದಿನವೆಲ್ಲ ಕೆಚ್ಚಲು ತುಂಬಿದ್ದರೂ ಸಾಯಂಕಾಲ ಹಿಂಡುವ ಸಮಯಕ್ಕೆ ಕೆಚ್ಚಲು ಬರಿದಾಗಿರುತ್ತಿತ್ತು. ದಿನವೂ ಇದನ್ನು ಕಂಡ ದನಗಾಯಿಗೆ ಅಚ್ಚರಿ. ಇದು ಏನು ಎಂದು ಅವನು ಕಲ್ಯಾಣಿಯ ಮೇಲೆ ನಿಗ ಇಡುತ್ತಾನೆ. ದಿನವೂ ಮನೆಗೆ ತೆರಳುವ ಮುನ್ನ ಕಲ್ಯಾಣಿ ಗುಡ್ಡದ ತುದಿಯ ಮೇಲೆ ಹೋಗಿ ತುದಿಯಲ್ಲಿ ನಿಂತು ಒಂದು ಬಂಡೆಯ ತುದಿಯ ಮೇಲೆ ಹಾಲುಗರೆದು ಅಭಿಷೇಕ ಮಾಡುತ್ತಿರುತ್ತದೆ. ಈ ಸಮಾಚಾರ ರಾಜನ ಕಿವಿಗೆ ಮುಟ್ಟಿದಾಗ ಪಂಡಿತರ ಮೂಲಕ ಸ್ಥಳದ ಮಹತ್ವ ತಿಳಿಯುತ್ತದೆ. ಅದು ಉದ್ಭವ ಲಿಂಗವೆಂದು ತಿಳಿದು ತನ್ನ ಕುಲದೇವತೆಯ ಅವತಾರವೇ ಅದು ಎಂದು ತಿಳಿದು ಹಾವನೂರು ಹನುಮಂತಗೌಡ ಆ ಸ್ಥಾನವನ್ನು ಪವಿತ್ರ ಸ್ಥಳವನ್ನಾಗಿ ಮಾರ್ಪಡಿಸಿ ದೇವರಿಗೆ ಎಲ್ಲ ರೀತಿಯ ಚಾಕರಿಗಳೂ, ವಂಶಪರಂಪರವಾಗಿ ನಡೆಯಲು ಉಂಬಳಿ ಹಾಕಿಕೊಟ್ಟಿದ್ದಾನೆ (ಆ ಸನದುಗಳನ್ನು ಈಗ ಕೆಲವರಲ್ಲಿ ಕಾಣಬಹುದಾಗಿದೆ). ಅದು ಹಾಗೆಯೇ ಮೈಲಾರನ ಪವಿತ್ರ ಸ್ಥಳವಾಗಿ ಬೆಳೆದು ದೇಶದ 'ಖಂಡೋಬ'ನ ಹಿರಿಯ ಸ್ಥಾನಗಳಲ್ಲಿ ಒಂದೆಂಬ ಸಂಗತಿ ಅಭಿಮಾನ ತರುವಂತಹದು.

ಮಹಾನವಮಿಯಲ್ಲಿ ಅಲ್ಲಿ ಗೊರವರಿಂದ ನಡೆಯುವ ಪವಾಡಗಳ ವಿಷಯಕ್ಕೆ ಸರಿಯಾದ ಪ್ರಸಿದ್ಧಿ ಸಿಕ್ಕರೆ ಈಗಲೂ ಕೂಡ ಆ ಸಮಯಕ್ಕೆ ಅಂತರರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸುವ ಸಾಧ್ಯತೆ ಇದೆ. ಅದೇ ಸಮಯ ಇಲ್ಲಿ ನಡೆಯುವ ಜನಗಳ ಜಾತ್ರೆಯೂ ದೊಡ್ಡದು.



ತುಂಗಭದ್ರಾ ದೃಶ್ಯ ಐರಣಿ.

ಇಲ್ಲಿಂದ ಮತ್ತೆ ದಕ್ಷಿಣಕ್ಕೇ ಮುಂದುವರೆದರೆ ರಾಣೇಬೆನ್ನೂರು ಸಿಕ್ಕುತ್ತದೆ. ಅದು ಜಿಲ್ಲೆಯ ವ್ಯಾಪಾರ ಸ್ಥಳಗಳಲ್ಲೊಂದು. ಅಲ್ಲಿ ನಾವು ಮತ್ತೆ ರಾಷ್ಟ್ರೀಯ ಹೆದ್ದಾರಿ ನಾಲ್ಕಕ್ಕೆ ತಲುಪುತ್ತೇವೆ! ಹಾಗೆ ಪೂರ್ವಕ್ಕೆ ಪ್ರವಾಸಿಸಿದರೆ ಚಳಕೆರೆ ಸಿಕ್ಕುವದು. ಅಲ್ಲಿಂದ ದಕ್ಷಿಣಕ್ಕೆ ಸಾಧಾರಣ ಐದು ಕಿ.ಮೀ. ಮುನ್ನಡೆದರೆ ಐರಣಿ ಎಂಬ ಹಳ್ಳಿ ಸಿಗುವುದು. ಅಲ್ಲಿ ಹಾವನೂರು ಹನುಮಂತಗೌಡನ ಕಾಲಕ್ಕೆ ನಿರ್ಮಾಣವಾದ

ಕೋಟೆಯ ಅವಶೇಷಗಳು ತುಂಗಭದ್ರೆಯ ದಡದ ಎತ್ತರದ ಮೇಲೆ ನಿಂತಿದೆ. ಇತಿಹಾಸದಲ್ಲಿ ಆಸಕ್ತಿ ಇದ್ದವರಿಗೆ ಇಲ್ಲವೆ ಹಳೆಯ ಕೋಟೆಗಳನ್ನು ನೋಡಬೇಕೆಂಬ ಆಸ್ಥೆ ಇದ್ದವರಿಗೆ ಮಾತ್ರ ಅದು ಹೋಗಬೇಕಾದ ನೋಡಬೇಕಾದ ಸ್ಥಳ. ಇಲ್ಲವಾದರೆ ಮುಳ್ಳಿನ ಕೊಂಪೆ. ಆ ಊರಿನ ಜನ ಹೇಳುತ್ತಾರೆ. ಕೆಲವರ್ಷಗಳ ಹಿಂದೆ ಹುಚ್ಚು ಹೊಳೆ ಬಂದಾಗ್ಗ ಈ ಕೋಟೆ ಇರದಿದ್ದರೆ ಐರಣಿ ಗ್ರಾಮ ಹೇಳಹೆಸರಿಲ್ಲದಂತೆ ಆಗುತ್ತಿತ್ತಂತೆ. ಎರಡು ದೃಷ್ಟಿಯಿಂದ ಆ ಕೋಟೆಯನ್ನು ಯೋಜಿಸಿರಬಹುದೆ?

ರಾಣೇಬೆನ್ನೂರಲ್ಲಿ ಜಿಂಕೆಯವನವನ್ನು ನೋಡಿ ಅಲ್ಲಿಯೇ ತಂಗಬಹುದು. ಇಲ್ಲವೆ ಮತ್ತೆ ಹಾವೇರಿಗೂ ಮರಳಬಹುದು.


ಕಾಗಿನೆಲೆಯ ಕನಕದಾಸರು.

***ಕಾಗಿನೆಲೆ***

ರಾಣೇಬೆನ್ನೂರಿಂದ ಹೊರಟು ಕದರಮಂಡಲಗಿಯ ಆಂಜನೇಯನ ದರ್ಶನ ಪಡೆದು ಕಾಗಿನೆಲೆಗೆ ಪ್ರಯಾಣಿಸಬಹುದು. ಕಾಗಿನೆಲೆಯ ವಿಷಯ ಬರೆದು ತಿಳಿಸಬೇಕಾದ್ದೇನು ಅಲ್ಲ. ಆದಿಕೇಶವನ ಪವಿತ್ರ ಸ್ಥಾನ ಕನಕದಾಸರ ಕರ್ಮಭೂಮಿ, ತಪಸ್ಸಿನ ತಾಣ! ಈಗ ಕನಕದಾಸರ ಮಂದಿರ ಕನಕಪೀಠವು ಅಲ್ಲಿ ರೂಪುಗೊಂಡು ಪ್ರವಾಸಿಗರಿಗೆ ನೋಡಬೇಕಾದ ಸ್ಥಳವಾಗಿ ಪರಿಣಮಿಸಿದೆ.

ಬಂಕಾಪುರಕ್ಕೆ ಹೋದರೆ 'ಬಾಡ' ಹಳ್ಳಿ ಸಿಕ್ಕುತ್ತದೆ ಅದೇ ಕನಕದಾಸರ ಜನ್ಮಸ್ಥಳ-ಸ್ಮಾರಕ ಒಂದನ್ನು ಈಗ ಅಲ್ಲಿ ನಿರ್ಮಿಸಲಾಗಿದೆ!

ಇಲ್ಲಿಂದ ಮತ್ತೆ ಹಾವೇರಿಗೆ ಬಂದರೆ ಒಂದು ಸುತ್ತಿನ ಪ್ರವಾಸ ಮುಗಿದಂತಾಗುತ್ತದೆ.

***ಕಲಕೇರಿ***

ಈ ಗ್ರಾಮ ಹಾನಗಲ್ಲ ತಾಲೂಕಿಗೆ ಸೇರಿ, ಅಲ್ಲಿಂದ 35 ಕಿ.ಮಿ.ಅಂತರದಲ್ಲಿದ್ದರೂ ಹಾವೇರಿಗೇ ಹತ್ತಿರವೆಂದು ಹೇಳಬಹುದು. ಹಾನಗಲ್ಲು ಮಾರ್ಗದಲ್ಲಿ ಸಿಕ್ಕುವ ಸಂಗೂರಿಗೆ ಹೋಗಿ ಅಲ್ಲಿಂದ ಈ ಸ್ಥಳಕ್ಕೆ ಹೋಗಬಹುದಾಗಿದೆ.

ಈ ಊರಿನ ಇತಿಹಾಸ ದೊಡ್ಡದಿದೆ. ಕತೆಹೇಳುವ ಶಾಸನಗಳು ಸಾಲು ಸಾಲಾಗಿ ನಿಂತಿದೆ. ಕೆರೆಯ ದಂಡೆಗುಂಟ ಕಲ್ಲು, ಶಾಸನಗಳು ಹೀಗಾಗಿ ಕಲ್ಲು+ಕೆರೆ ಇವುಗಳನ್ನು ಕಂಡೆ ''ಕಲಕೇರಿ'' ಎಂದರೇ ಎಂದು ನನ್ನ ಅಲ್ಪಬುದ್ಧಿಗೆ ಹೊಳೆವ ಮಾತು? ಶಾಸನ ಅಭ್ಯಾಸಿಗಳಿಗೆ ಇದೊಂದು ಉತ್ತಮ ತಾಣ.

ನಾವು ಈಸ್ಥಳದ ಹೆಚ್ಚಿನ ವಿವರ ಬಿಟ್ಟು ಪ್ರೇಕ್ಷಣೀಯ ದೃಷ್ಟಿಯಿಂದ ಅಲ್ಲಿರುವ ಮಂದಿರಗಳ ಬಗ್ಗೆ ನೋಡುವದಷ್ಟೇ

ಉಚಿತವೇನೊ ಎನಿಸುತ್ತದೆ.

ಇಲ್ಲಿಯ ಕೆರೆಯದಂಡೆಯ ಮೇಲಿರುವ ಐದು ಗುಡಿಗಳಲ್ಲಿ "ಸ್ವಯಂಭು" ಸೋಮೇಶ್ವರ ಮಂದಿರ ವಿಶಾಲವಾದದ್ದು, ಆಕರ್ಷಣೀಯವೂ ಅಹುದು! ಗರ್ಭಗೃಹ ಅಂತರಾಳ ನವರಂಗಗಳನ್ನು ಹೊಂದಿರುವ ಈ ಗುಡಿಯ ಒಂದು ಗರ್ಭದಲ್ಲಿ ಮಾತ್ರ ಸ್ವಯಂಭು ಲಿಂಗ ಗೋಚರವಾಗುತ್ತದೆ. ಎಲ್ಲ ಗರ್ಭಗಳ ಬಾಗಿಲುವಾಡಗಳ ತ್ರಿಶಾಖಾಲಂಕಾರವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯೇ ಪ್ರಸನ್ನಳಾಗಿದ್ದಾಳೆ. ಅಂತರಾಳದ ಬಾಗಿಲವಾಡಗಳು ಮಾತ್ರ ಬ್ರಹ್ಮ-ವಿಷ್ಣುಗಳಿಂದ ಅಲಂಕೃತವಾಗಿದ್ದು ಹದಿನಾರು ಕಂಬಗಳನ್ನು ಹೊಂದಿರುವ ನವರಂಗದ ಅಂಚಿನಲ್ಲಿ ರಕ್ಷಾಸನವಿದೆ. ನವರಂಗದ ಛಾವಣಿ ಮಧ್ಯ ಚಪ್ಪಟೆಯಾಗಿದೆ. ಗರ್ಭಗಳಿಗೆ ಕದಂಬ-ನಾಗರ ಶೈಲಿಯ ಶಿಖರಗಳಿವೆ. ಈ ಮಂದಿರ ಕ್ರಿ.ಶ. ೧೧ನೇ ಶತಮಾನದ ಪೂರ್ವಾರ್ಧದ್ದು ಎಂದು ಊಹಿಸಲಾಗಿದೆ. ಈ ಮಂದಿರದ ಹಿಂಬದಿಯಲ್ಲಿ ಈಶ್ವರ ಗುಡಿಯಿದೆ. ಇದು ದ್ರಾವಿಡ ಶಿಖರವನ್ನು ಹೊಂದಿದೆ. ಅರ್ಧಮಂಟಪದ ಬಾಗಿಲವಾಡಗಳನ್ನು ಮಕರಣ ತೋರಣ ಅಲಂಕರಿಸಿದ್ದು ನಡುವೆ ಬ್ರಹ್ಮ, ಮಹೇಶ್ವರ, ವಿಷ್ಣು ಮೂರ್ತಿಗಳಿದ್ದು ಸುಂದರ ಕೆತ್ತನೆಯ ಜಾಲಾಂಧ್ರಗಳಿವೆ.

ಊರ ಮಧ್ಯದಲ್ಲಿರುವ ಸೂರ್ಯನಾರಾಯಣ ದೇವಾಲಯ ಚತುರ್ಕೂಟ ಮಂದಿರ ನಾಲ್ಕು ದಿಕ್ಕಿನಲ್ಲೂ ಗರ್ಭವನ್ನು ಹೊಂದಿನ ಪೂರ್ವಪಶ್ಚಿಮ ಗರ್ಭಗಳಿಗೆ ಮಾತ್ರ ಅಂತರಾಳವಿದ್ದು ಉತ್ತರ ದಕ್ಷಿಣ ಗರ್ಭಗೃಹಗಳಿಗೆ ಇರುವುದಿಲ್ಲ. ಪೂರ್ವಪಶ್ಚಿಮ ಗರ್ಭಗಳಲ್ಲಿ ಸುಂದರವಾದ ಆದಿತ್ಯನ ಶಿಲ್ಪ ಹಾಗೂ ಶಿವಲಿಂಗಗಳಿದ್ದು ದಕ್ಷಿಣದಲ್ಲಿ ಹಂಸಪೀಠದ ಮೇಲೆ ನಾಗನಾಗಿಣಿ ಶಿಲ್ಪ. ಉತ್ತರ ಗರ್ಭದಲ್ಲಿ ಗರುಡ ಪೀಠದ ಮೇಲೆ ಆದಿತ್ಯನ ಮೂರ್ತಿ ಇದೆ!


ಪೂರ್ವಗೃಹದಲ್ಲಿರುವ ಸೂರ್ಯನ ಶಿಲ್ಪ ಆಕರ್ಷಕವಾಗಿದ್ದು ಪ್ರಭಾವಳಿಯಲ್ಲಿ ದ್ವಾದಶ ಸೂರ್ಯರನ್ನು ಕೆತ್ತಲಾಗಿದೆ. ಇದಲ್ಲದೆ ಇನ್ನೂ ಅನೇಕ ಮಂದಿರಗಳು ಶಿಲಾಶಾಸನಗಳು, ವೀರಗಲ್ಲು ಮಾಸ್ತಿಕಲ್ಲುಗಳು ಊರತುಂಬ ಕಣ್ಣಿಗೆ ಬೀಳುತ್ತವೆ. ನಾನು ಇಲ್ಲಿ ಭೆಟ್ಟಿನೀಡಿದಾಗಿನ ದಾರಿ ಅಷ್ಟು ಚನ್ನಾಗಿರಲಿಲ್ಲ. ಅದನ್ನು ಸಜ್ಜುಗೊಳಿಸಿ ಪ್ರಚಾರ ನೀಡಿದರೆ ಇನ್ನೂ ಆಕರ್ಷಣೀಯ ಪ್ರವಾಸೀ ಕೇಂದ್ರವಾದೀತು!.

**ಹಾನಗಲ್ಲು**

ಮತ್ತೆ ಸಂಗೂರಿಗೆ ಬಂದೇ ಹಾನಗಲ್ಲಿಗೆ ಹೋಗುವುದು ಚನ್ನ ಎಂದು ಕಾಣುತ್ತದೆ.

ಹಾನಗಲ್ಲು ವಿರಾಟನಗರ ಪಾಂಡವರು ವಾಸವಾಗಿದ್ದರು ಎಂಬುದಕ್ಕೆ ಏಳುಸುತ್ತಿನ ಕೋಟೆ ಕೀಚಕನ ಗರಡಿ ಮನೆ ಇವು ಸಾಕ್ಷಿ. ಪೌರಾಣಿಕ, ಐತಿಹಾಸಿಕ ಪ್ರಸಿದ್ಧಿ ಹೊಂದಿದ ಈ ಊರಿನ ಈಗಿನ ಪ್ರೇಕ್ಷಣೀಯ ಆಕರ್ಷಣೆ ಎಂದರ ಭವ್ಯವಾದ ತಾರಕೇಶ್ವರ ಮಂದಿರ ವಾಸ್ತುಶಿಲ್ಪದ ನೈಪುಣ್ಯ. ಇಲ್ಲಿ ಬಹಳ ಎತ್ತರಕ್ಕೇ ಏರಿದೆ. ಮಂದಿರ ಕದಂಬರ ಕಾಲದಲ್ಲಿ ನಿರ್ಮಾಣವಾಗಿದ್ದರೂ ವಾಸ್ತು ಚಾಲುಕ್ಯರ ಶೈಲಿಯದ್ದು. ಗರ್ಭಾಲಯದಲ್ಲಿ ಬೃಹದಾಕಾರದ ಲಿಂಗರೂಪದಲ್ಲಿ ತಾರಕೇಶ್ವರನಿದ್ದಾನೆ. ಅಲ್ಲದೆ, ಮುಖಮಂಟಪ, ಮಂಟಪ, ಒಳಮಂಟಪ ಎಲ್ಲವೂ ಇದೆ. 60X40

ಅಡಿ ಮುಖಮಂಟಪಕ್ಕೆ ಸುಂದರವಾದ ಕೆತ್ತನೆ ಛತ್ತು ಪ್ರಸಿದ್ಧ ಶಿಲ್ಪ, ತಿರುವಿದ ಚಿತ್ರದಾಸವಾಳದ ಹೂವಿನಂತಿದ್ದ ಛತ್ತಿನ ವಾಸವೇ ೨೧ ಮಧ್ಯದ ಕುಸುವ ಒಂಭತ್ತು ಅಡಿ ಜೋತುಬಿದ್ದಿರುವ ವಿಚಿತ್ರಶಿಲ್ಪ ಛತ್ತೂ ಎಂಟು ಕಂಬಗಳ ಮೇಲೆ ವಿರಾಜಿಸುತ್ತದೆ. ಈ ಎಂಟು ಕಂಬಗಳೂ, ಅಷ್ಟ ದಿಕ್ಪಾಲಕರನ್ನು ಹೊಂದಿರುವ ಅಷ್ಟಸ್ಥಂಬಗಳು, ಇವು ಅಪೂರ್ವವಾದ ಶಾಸ್ತ್ರೋಕ್ತವಾಗಿರುವ ಶಿಲ್ಪಗಳು!



ತಾರಕೇಶ್ವರ ದೇವಸ್ಥಾನ ಹಾನಗಲ್ಲ.

ಈ ಮಂದಿರಕ್ಕೆ ಒಟ್ಟು ಐವತ್ತೆರಡು ಕಂಬಗಳಿವೆ. ಎಲ್ಲವೂಗಳ ಆಕೃತಿ ವಿವಿಧ ಪ್ರತಿ ಕಂಬದ ಕೋನದಲ್ಲಿ ಗಜಾವತಾರ ಅವುಗಳ ಭಂಗಿಗಳೂ ಬೇರೆ ಬೇರೆ.

ಇಲ್ಲಿಯ ಅಂದಿನ ಶಿಲ್ಪಿಗಳು ಬಂಡುಕೋರ ಶಿಲ್ಪಿಗಳಿದ್ದರೇನೋ! ಜನ್ಮಾವತಾರವನ್ನು ಹೆಣೆಯುವಾಗ ಹೆರಿಗೆಯ ಚಿತ್ರವನ್ನು ಪ್ರತ್ಯಕ್ಷ ತೋರಿಸುವಷ್ಟು ದಿಟರಿದ್ದರೆಂದು ಕಾಣುತ್ತದೆ. ಪೌರಾಣಿಕ ದೃಶ್ಯ, ನೃತ್ಯ, ವಾದ್ಯ, ಯುದ್ಧ ದೃಶ್ಯಗಳಲ್ಲದೇ, ಸಾರಿಗೆ ಸಾಮಾಜಿಕ ಮುಂದಾದ ವಿಷಯಗಳು ಇವರ ಚಾಣದಲ್ಲಿ ತಪ್ಪಿಸಿಕೊಂಡಿಲ್ಲ. ವಿನೋದವೂ ಇವರಲ್ಲಿ ಸುಳಿದು ಹೋಗಿದೆ. ಪ್ರೇಮಿಗಳಿಬ್ಬರು ತಮ್ಮ ಗುಂಗಿನಲ್ಲಿಯೇ ಹೊರಟಿರುತ್ತಾರೆ. ದಾರಿಯಲ್ಲಿ ಮಂಗ ಒಂದು ಬಂದು ಅವಳ ಸೀರೆಯನ್ನು ।ಎಳೆದಾಗ ಅದನ್ನು ನೋಡಿ ಗಾಭರಿಯಾಗಿ ಇನಿಯನನ್ನು ತಬ್ಬಿರುವ ದೃಶ್ಯ ಬಹು ಅಂದವಾಗಿದೆ. ಅರ್ಥಪೂರ್ಣವಾಗಿದೆ. ಇಂಥ ಸಾವಿರಾರು ಚಿತ್ರಗಳು ಈ ವಿಶಾಲ ಮಂದಿರದ ತುಂಬ ಹರಡಿದೆ! ಈ ಮಂದಿರವನ್ನು ಕೂಲಂಕುಶವಾಗಿ ನೋಡಿ, ಅದರ ಸೊಬಗನ್ನು ಸವಿಯಬೇಕಾದರೆ ಒಂದು ದಿನವೇ ಬೇಕಾದೀತು!.

### ಬಂಕಾಪುರ


ಇದೊಂದು ಐತಿಹಾಸಿಕ ಸ್ಥಳವಾಗಿತ್ತೆಂಬುದಕ್ಕೆ ಇಲ್ಲಿರುವ ಹಳೆಯ ಕೋಟೆಯ ಅವಶೇಷವು ಸಾಕ್ಷಿ. ಅದರ ಕಂದಕವೂ ಅಷ್ಟೇ ದೊಡ್ಡದು. ಹಿಂದೆ ವಿಜಾಪುರದ ಆದಿಲಶಾಹಿಯ ಕಾಲಕ್ಕೆ ಬಂಕಾಪುರ ಅವರ ಒಂದು ಮುಖ್ಯ ಆಡಳಿತದ ಸ್ಥಳವಾಗಿತ್ತು. ಇಂದು ಕೋಟೆಯ ಕಂದಕವು ರಾಷ್ಟ್ರೀಯ ಪಕ್ಷಿ ನವಿಲುಗಳ ಆಗರವಾಗಿ, ಸಾಯಂಕಾಲ ನೂರಾರು ನವಿಲುಗಳನ್ನು ನೋಡಬೇಕೆಂದರೆ ಅದು ಇಲ್ಲಿ ಮಾತ್ರ ಸಾಧ್ಯ. ಕೋಟೆಯ ಆವಾರ ಬಹುದೊಡ್ಡದು. ಇಲ್ಲಿಯೇ ಚಾಲುಕ್ಯ ಶಿಲ್ಪಕ್ಕೆ ಸೇರಿದ ನಗರೇಶ್ವರ ದೇವಸ್ಥಾನವೂ ಇದೆ. ಈ ದೇವಸ್ಥಾನದ ಸಭಾ ಮಂಟಪ ವಿಶಾಲವಾದುದು. 60 ಕ್ಕೂ ಮಿಕ್ಕಿ ಕಂಬಗಳಿವೆ ಜನ, ಅರವತ್ತು ಕಂಬದ ಗುಡಿಯೆಂದು ಕರೆಯುತ್ತಾರೆ. ಈ ದೇವಸ್ಥಾನ ಆಗಾಗ ಪರಿವರ್ತನ ಹೊಂದಿರುವದೆಂದು ಪ್ರತೀತಿ . ನಗರೇಶ್ವರ ದೇವಸ್ಥಾನ, ನಗರಬಸದಿ, ರಂಗನಾಥ ದೇವಸ್ಥಾನ, ಮುಸ್ಲೀಮರ ಆಳಿಕೆಯಲ್ಲಿ ಮಸೀದಿಯೂ ಆಗಿತ್ತೆಂದು ಪ್ರತೀತಿ.



ಜೋಡುನಾಗರ ಶಿಲ್ಪ ಬಂಕಾಪುರ.

ದೇವರಿಲ್ಲದ ಗರ್ಭಗುಡಿಯ ಬಾಗಿಲು ದೊಡ್ಡದಾಗಿಯೂ ಕಲಾಪೂರ್ಣವೂ ಆಗಿದ್ದು ಪಶ್ಚಿಮಾಭಿಮುಖವಾಗಿದೆ. ಮಂದಿರದ ಆವರಣದ ಹೊರಭಾಗದಲ್ಲಿ ಪೌರಾಣಿಕ ಪ್ರಸಂಗದ ಚಿತ್ರಗಳಿದ್ದು ಅವುಗಳಲ್ಲಿ ಕೆಲವು ಈಗ ಮಾಯವಾಗಿವೆ. ಈ ಊರಲ್ಲಿ ಇಷ್ಟೊಂದು ಭವ್ಯವಾದ ಕಲಾಪೂರ್ಣವಾದ ಶಿಲ್ಪದಾಗರ ಇರುವೆಂಬುದು ಬಹುಜನಕ್ಕೆ ತಿಳಿಯದೇ ಇರುವದು ಖೇದದ ವಿಷಯ.

ಊರ ಮಧ್ಯ ವಿಶಾಲ ಅಂಗಣದಲ್ಲಿರುವ ಇಂದಿನ ಸಿದ್ಧೇಶ್ವರ ದೇವಾಲಯವೇ ಅಂದಿನ ಹೊಯಿಸಳೇಶ್ವರ ದೇವಸ್ಥಾನ. ಇದಕ್ಕೂ ವಿಷ್ಣುವರ್ಧನನ ರಾಜಕೀಯವನ್ನು ತಿಳಿಸುವ ಸ್ಥಾನ. ಕ್ರಿ. ಶ. 1141 ರಲ್ಲಿ ವಿಷ್ಣುವರ್ಧನ ಇಲ್ಲಿಯೇ ಮರಣ ಹೊಂದಿದನೆಂದು ಚಿಕ್ಕಮಗಳೂರು ಜಿಲ್ಲೆಯ 'ಹವಳ್ಳಿ' ಶಾಸನ ಹೇಳುತ್ತದೆ ಎಂದು ಸಾರಿದ್ದಾಗಿದೆ. ಈ ದೇವಸ್ಥಾನವೂ ಕೂಡ ಕಲಾಪೂರ್ಣವಾಗಿದೆ. ಹೀಗೆ ಅಲ್ಲಲ್ಲಿ ದೇವಸ್ಥಾನಗಳು ಇವೆ. ಇಲ್ಲಿಯ ಎಲ್ಲಮ್ಮನ ದೇವಸ್ಥಾನದಲ್ಲಿಯ ಮಹಿಷಾಸುರ ಮರ್ದಿನಿಯ ಮೂರ್ತಿ ನೋಡುವಂತಹದು. ಹಾಗೆಯೇ ಆಳೆತ್ತರದ ಒಂಟಿಗಾಲಿನ ಗಣಪತಿಯ ಮೂರ್ತಿ ಕೂಡ ವಿಚಿತ್ರವಾದ ಶಿಲ್ಪ.



ನಗರೇಶ್ವರ ದೇವಾಲಯ ಬಂಕಾಪುರ.


ಇಲ್ಲಿಯ ಕೆಲವು ಬಾವಿಗಳ ವಿಷಯ ತಿಳಿಯಲೇ ಬೇಕು. ''ಪಂಚಮಲಕಪ್ಪನ ಬಾವಿ'' ಬಹುದೊಡ್ಡದು ಹಾಗೂ ಕಲಾಪೂರ್ಣವಾಗಿ ನಿರ್ಮಿಸಲು ಬಹು ಪ್ರಯತ್ನ ಪಟ್ಟಿರುವ ಸಹಾಸ ಕಂಡು ಬರುತ್ತದೆ. ಇಳಿಯಲು ಪಾವಟಿಗೆ ಅದಕ್ಕೆ ಅಂದವಾದ ಬಾಗಿಲದ ಅಂಲಕಾರ ಭಿತ್ತಿಗಳು ಗಣಪತಿ, ಜೋಡು ಸರ್ಪಗಳು ಹೆಣೆದುಕೊಂಡಿರುವ ಶಿಲ್ಪ ಮೇಲಂತಸ್ತಿನ

ಮೇಲ್ಚಾವಣೆಯಲ್ಲಿ ಇನ್ನೊಂದು ಏಳು ಹೆಡೆಯಸರ್ಪ ಬಾಲಸುತ್ತುಕೊಂಡಿರುವ ದೃಶ್ಯ ಕುತೂಹಲ ಕೆರಳಿಸುತ್ತದೆ. ಪಂಚಪ್ಪ ಮಲಕಪ್ಪ ಎಂಬ ಸಹೋದರರು ನಿರ್ಮಿಸಿದರೆಂಬುದಕ್ಕೆ ಆ ಹೆಸರು. ಇದಲ್ಲದೆ ನಾಗರಬಾವಿ ಕಳ್ಳರಬಾವಿ ಎಂಬವೂ ಇವೆ. ಹೀಗೆ ಶಿಲ್ಪಗಳು ದೇವಸ್ಥಾನಗಳಿಂದ ತುಂಬಿರುವ ಜನಕ್ಕೆ ಇನ್ನೊಂದು ಅಚ್ಚರಿಯನ್ನು ಸಾರುತ್ತದೆ.

### *ಸ್ವಾತಂತ್ರ್ಯವೀರ ನರಗುಂದ ಬಾಬಾಸಾಹೇಬರ ಗದ್ದುಗೆಯೇ ಇಲ್ಲಿದೆ....*

ಈ ಊರಿನ ವಾಯವ್ಯ ದಿಕ್ಕಿಗೆ ಗದಗ-ಪಾಳಾ ರಸ್ತೆಯಲ್ಲಿ ''ಜೇರುಗಟ್ಟಿ'' ಎಂಬ ಮಠವಿದೆ. ಇಲ್ಲಿ ಒಂದು ಗದ್ದುಗೆ ಇದೆ. ಗದ್ದುಗೆ ಎಡಬಲದಲ್ಲಿ ಮಂಗಳೂರು ಹಂಚಿನ ಖೋಲಿಗಳಿವೆ. ಹೊಸ ಪದ್ಧತಿಯಲ್ಲಿ ನಿರ್ಮಾಣವಾದುದು. ಅವನ್ನು ನೋಡಿದರೆ, ಅದೊಂದು ಮಠವೆಂದೆನಿಸುವುದಿಲ್ಲ. ಆದರೆ ಆ ಗದ್ದುಗೆಯೇ ಬ್ರಿಟಿಶರೊಡನೆ ಹೋರಾಡಿ ತಲೆತಪ್ಪಿಸಿ ಕೊಂಡಿದ್ದ ವೀರ -ನರಗುಂದ ಬಾಬಾಸಾಹೇಬನ ಗದ್ದುಗೆಯೆಂದು ಹೇಳುತ್ತಾರೆ. ಬಾಬಾಸಾಹೇಬರು ಬ್ರಿಟಿಷರ ಕೈಗೆ ಎಂದೂ ಸಿಕ್ಕಲಿಲ್ಲ. ಬ್ರಿಟಿಷರು ಗಲ್ಲಿಗೇರಿಸಿದರು ಎಂದು ಹೇಳುವ ವ್ಯಕ್ತಿಯೇ ಬೇರೆ....

ಸಾಧ್ಯವಿದ್ದ ಮಟ್ಟಿಗೆ ಧಾರವಾಡ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಹೇಳಿದ್ದಾಯಿತು, ಆದರೆ ಪ್ರೇಕ್ಷಣೀಯವಲ್ಲದಿದ್ದರೂ ಮಹತ್ವದ ಸ್ಥಳಗಳು ಕೆಲವಿವೆ. ಹೊಸರಿತ್ತಿಯಲ್ಲಿ ಗಾಂಧಿ ಆಶ್ರಮ, ಅಲ್ಲಿಯ Resident ಸ್ಕೂಲ. ದೇಶದಲ್ಲಿಯೇ ಪ್ರಸಿದ್ಧವಾದ ಮೆಣಸಿನಕಾಯಿ ವ್ಯಾಪಾರಸ್ಥಳ ಬ್ಯಾಡಗಿ. ಹಾವೇರಿ ಪ್ರೇಕ್ಷಣೀಯ




ಕರ್ಜಗಿ ಕಾರಹುಣ್ಣಿಮೆ ಬಂಡಿ ಓಟ.

ಸ್ಥಳವಾಗಿದ್ದೂ ವರ್ಷವಿಡೀ ನಡೆಯುವ ದನಗಳ ಜಾತ್ರೆಗೂ ಈ ಸ್ಥಳ ಪ್ರಸಿದ್ಧ. ಹಾವೇರಿ ಹತ್ತಿರವೇ ಇರುವ (10km) ಅಗಡಿ ಆನಂದವನ ಸಾಧು ಶೇಷಾಚಲರ ಪುಣ್ಯಭೂಮಿ. ಕಾದಂಬರಿ ಪಿತಾಮಹ ಗಳಗನಾಥರ ಕರ್ಮಭೂಮಿ. 1908 ನೇ ಇಸ್ವಿಯಲ್ಲಿಯೇ ಪ್ರಾರಂಭವಾದ ಮಾಸ ಪತ್ರಿಕೆ ಅವಿರತವಾಗಿ ಇಂದಿಗೂ ಪ್ರಕಟವಾಗುತ್ತಿರುವದು ಜಿಲ್ಲೆಗೆ ಒಂದು ಅಭಿಮಾನದ ಮಾತು. ಕನ್ನಡದ ಬಹುಕಾಲ ಬಾಳಿದ ಕನಡ ಪತ್ರಿಕೆಗಳಲ್ಲಿ ''ಸದ್ಬೋಧ ಚಂದ್ರಿಕೆಯೂ ಒಂದು! ಕರಜಗಿಯಲ್ಲಿ ನಡೆಯುವ ಕಾರಹುಣ್ಣಿವೆ ಹಾಗು ಹಾನಗಲ್ಲಿನಲ್ಲಿ ನಡೆಯುವ ಸಂಕ್ರಮಣದ ಎತ್ತಿನ ಪಂದ್ಯಗಳು ಮಹತ್ವದ ಸಾಂಸ್ಕೃತಿಕ ಘಟನೆಗಳು.

ಸವಣೂರಲ್ಲಿ ವಿಶ್ವಖ್ಯಾತಿಯ, ಅಷ್ಟೇ ಅಪರೂಪದ ವೃಕ್ಷಗಳಿರುವದು ಈ ಜಿಲ್ಲೆಗೆ ಇನ್ನೊಂದು ಅಭಿಮಾನದ ಸಂಗತಿ. ಸವಣೂರಿಂದ ಗದಗಿಗೆ ಹೋಗುವ ಮಾರ್ಗದಲ್ಲಿ ಅರ್ಧ ಕಿ. ಮೀ. ನಷ್ಟು ಅಂತರದಲ್ಲಿ ಕಲ್ಮಠ ಎಂಬುದೊಂದು ಮಠ. ಅದರ ಆವರಣದಲ್ಲಿ ಕೆಲ ವೃಕ್ಷಗಳು ಕಾಣಸಿಗುತ್ತವೆ. ಬಹು ಬೃಹದಾಕಾರದ ಈ ವೃಕ್ಷಗಳೆ ದೊಡ್ಡ ಹುಣಸಿಮರವೆಂದು ಕರೆಯುತ್ತಾರೆ. ಈ ವೃಕ್ಷ ಆಫ್ರಿಕದಲ್ಲಿ ಮಾತ್ರದಲ್ಲಿದ್ದು ಭಾರತದಲ್ಲಿ ಸವಣೂರು ಅದರ ಅದಿಷ್ಠಾನವಾಗಿದೆ. ಇದೊಂದು ವಿಚಿತ್ರ, ಒಂದು ರಹಸ್ಯವೂ ಅಹುದು. ಅದರ ಹೆಚ್ಚಿನ ವಿವರ ಬರೆಯಲು ಇಲ್ಲಿ ಸ್ಥಳಾಬಾವ ಇಷ್ಟೆ. ಅಪರೂಪದ ಈ ವೃಕ್ಷಗಳು ಜಿಲ್ಲೆಗೊಂದು ಮುಕಟವಿದ್ದಂತೆ.

ಮೃದು ವಚನವೇ ಸಕಲ ಜಪಂಗಳಯ್ಯ
ಮೃದು ವಚನವೇ ಸಕಲ ತಪಂಗಳಯ್ಯ ॥
ಸದು ವಿನಯವೇ ಸದಾಶಿವನೊಲುಮೆಯಯ್ಯ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ ॥

– ಬಸವಣ್ಣ.



# ''ಕನ್ನಡ ಸಾಹಿತ್ಯ ಚರಿತ್ರೆಯ ೕ ಂಭದ ಮ ಾ ಸಾಹಿತ್ಯ''

✍ -ಶ್ರೀಮತಿ ಲಕ್ಷ್ಮೀ ತೋಸೀಖಾನೆ,
ಹಾವೇರಿ.

❀ ❀ ❀

ರಸಾನುಭವದ ಸುಂದರ ಅಭಿವ್ಯಕ್ತಿಯೇ ಸಾಹಿತ್ಯ. ಸಾಹಿತ್ಯದ ಮೂಲಸತ್ವ ಅಭಿವ್ಯಕ್ತಿಯ ಸಾಧನವಾದ ಭಾಷೆಯಲ್ಲಿರುತ್ತದೆ. ಆದ್ದರಿಂದ ಯಾವುದೇ ಭಾಷೆಯ ಉದಯದೊಂದಿಗೆ ಸಾಹಿತ್ಯವೂ ಉದಯಿಸಿರುತ್ತದೆ. ಭಾಷೆಯ ಉಗಮವೆಂದರೆ ಸಾಹಿತ್ಯದ ಉಗಮವೆಂದು ಹೇಳಬಹುದು. ಜನ ಬೆಳೆದಂತೆ ಎಲ್ಲಿ ಅವರ ಭಾಷೆ ಬೆಳೆದಿದೆಯೋ ಅಲ್ಲಿ ಸಹಜಸ್ಫೂರ್ತವಾದ ಸಾಹಿತ್ಯವೂ ಬೆಳೆದಿದೆ. ಜನರ ಭಾಷೆ ಸಾಹಿತ್ಯ ಪದವಿಗೆ ಏರಬೇಕಾದರೆ ಅದಕ್ಕೆ ಶ್ರವಣ ಪ್ರಿಯ ಬಹುಜನರು, ಪ್ರತಿಷ್ಠಿತ ನ್ ವರ್ಗ ಮತ್ತು ಕೀರ್ತಿವಂತ ಆಶ್ರಯದಾತರು ಇವು ಮೂರು ಬೇಕೆಂಬುದು ಅಂಬಿಕಾತನಯದತ್ತರ ಅಭಿ...

ಕನ್ನಡ ಸಾಹಿತ್ಯದ ಉದಯವನ್ನು ಕುರಿತು ಹೇಳುವುದು ಸರಳವಾದುದಲ್ಲ. ಏಕೆಂದರೆ ಖಚಿತವಾದ ಆಧಾರಗಳಿಲ್ಲ. ದೊರೆತ ಸಾಮಗ್ರಿಯ ಬಲದಿಂದ ಊಹೆಯ ಅಶ್ವವನ್ನೋಡಿಸಿದರೆ ದೊರಕುವ ಸಂಗತಿಯೆಂದರೆ ಕ್ರಿ.ಶ. ೯ ನೆಯ ಶತಮಾನಕ್ಕಿಂತ ಹಿಂದೆಯೇ ಅದು ಹುಟ್ಟಿ ಒಂದು ಶಿಷ್ಟ ಸಂಪ್ರದಾಯವಾಗಿ ರೂಪುಗೊಳ್ಳುತ್ತಿತ್ತು. ಇದಕ್ಕೆ ಕವಿರಾಜಮಾರ್ಗವೇ ಸಾಕ್ಷಿ. ಸಾಹಿತ್ಯದ ಮುಂದಣ ಚರಿತ್ರೆ ಬಹುದೀರ್ಘ ಕಾಲವನ್ನು ಒಳಗೊಂಡಿದ್ದು ತರಹ ತರಹದ ರೂಪಗಳನ್ನೂ, ಹಲವಾರು ಕೃತಿಗಳನ್ನೂ ಹೊಂದಿದೆ. ಅದರ ಅಭ್ಯಾಸವನ್ನು ಮಾಡಲು ಅನುಕೂಲವಾಗಲೆಂದು ಪಂಡಿತರು ವಿಭಾಗಕ್ರಮವನ್ನು ಅಳವಡಿಸಿದ್ದಾರೆ. ಪಂಪಪೂರ್ವಯುಗ, ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ - ಇತ್ಯಾದಿಯಾಗಿ ಅಭ್ಯಸಿಸುವುದು ಸರಳ.

ಕನ್ನಡ ಸಾಹಿತ್ಯ ಕ್ರಿ.ಶ. ೯ ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಆರಂಭಗೊಂಡಿದ್ದರೂ ಮಹಿಳಾ ಸಾಹಿತ್ಯದ ಉದಯ ತಡವಾಗಿಯೆ ಹುದು. ಅದಕ್ಕೆ ಕಾರಣಗಳು ಇಲ್ಲದಿಲ್ಲ. ಸರಿಯಾದ ಪ್ರೋತ್ಸಾಹ, ಅಭ್ಯಾಸಗಳ ಕೊರತೆಯೇ ಕಾರಣ. ... ಪಂಪಯುಗದ ಮಧ್ಯದಲ್ಲಿ ಆಯಿತೆಂದು ಸಾಹಿತ್ಯ ಚರಿತ್ರೆಕಾರರ ಅಭಿಪ್ರಾಯ. ಪಂಪಯುಗದಲ್ಲಿ ಪ್ರೌಢ ಸಾಹಿತ್ಯವಾಗಲೇ ಸ್ಥಿರವಾಗಿ ಕಾಲೂರಿನಿಂತು ತಲೆಯೆತ್ತಿತ್ತು. ಕನ್ನಡದ ಮೊದಲ ಮಹಿಳಾ ಸಾಹಿತಿಯ ದಾಖಲೆ ದೊರಕುವುದು ಕ್ರಿ.ಶ. ೧೧೦೦ ಸುಮಾರಿಗೆ. ಅಭಿನವ ಪಂಪನೆಂದು ಖ್ಯಾತನಾದ ನಾಗಚಂದ್ರನ